<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾದಿಕಾರಿಗಳವರ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.228/2014

ಪ್ರಾಸಾ-1 **(ಪ್ರೋಕ್ಲೆಮೇಶನ್ ಜಾರಿಕಾರ)**

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕಃ 24.10.2017

| | | |
|---|---|---|
| ಹೆಸರು | ಃ | ಚಂದ್ರಕಾಂತ ಅಂಕಲಗಿ |
| ತಂದೆಯ ಹೆಸರು | ಃ | ಹಣಮಂತಪ್ಪ |
| ವಯಸ್ಸು | ಃ | 54-ವರ್ಷ |
| ಉದ್ಯೋಗ | ಃ | ಹೆಚ್‌ಸಿ-449 |
| ವಾಸಸ್ಥಳ | ಃ | ಅಫಜಲಪೂರ |

ಮುಖ್ಯ ವಿಚಾರಣೆ ಃ ಎಪಿಪಿ ಯವರಿಂದ

4-ವರ್ಷದಿಂದ ನಾನು ಅಫಜಲಪೂರ ಠಾಣೆಯಲ್ಲಿ ಹೆಚ್‌ಸಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸದರಿ ಪ್ರಕರಣದಲ್ಲಿ ಆರೋಪಿತರ ವಿರುದ್ಧ ನೀಡಿದ ಉದ್ಘೋಷಣಾ ಜಾರಿ ಕುರಿತು ನಾನು ಪಡೆದ ಉದ್ಘೋಷಣಾ ಆದೇಶದ ಪ್ರತಿಯನ್ನು ಈ ಕೆಳಕಂಡಂತೆ ಆರೋಪಿತರು ಸಾಮಾನ್ಯವಾಗಿ ವಾಸಿಸುವ ಸ್ಥಳಗಳಲ್ಲಿ ಜಾಹೀರುಪಡಿಸಿರುತ್ತೇನೆ.

1. ದಿನಾಂಕ 12.04.2015 ರಂದು ಆರೋಪಿ ನಾನಾಸಾಬ ತಂದೆ ಭೀಮಾಶಂಕರ ಪವಾರ, ಸಾ. ಕಲ್ಲಳ್ಳಿ ಗ್ರಾಮಕ್ಕೆ ಮುಂಜಾನೆ 11-ಗಂಟೆಗೆ ಭೇಟಿ ನೀಡಿ 1) ಮಲ್ಲಿಕಾರ್ಜುನ ಶಿವಶಂಕರ ನಡುವಿನಮನಿ ಹಾಗೂ 2) ದಯಾನಂದ ಚಂದ್ರಶೇಖರ ಪಾಟೀಲ ಎನ್ನುವ ವ್ಯಕ್ತಿಗಳಿಗೆ ಉದ್ಗೋಷಣಾ ಜಾಹೀರು ಸಂದರ್ಭದಲ್ಲಿ ಪಂಚರಾಗಲು ವಿಷಯ ತಿಳಿಸಿ ಅವರನ್ನು ಕರೆದುಕೊಂಡು ಸದರಿ ಗ್ರಾಮದ ಲಕ್ಷ್ಮಿ ಗುಡಿಯ ಹತ್ತಿರ ಹೋಗಿ ಸಾರ್ವಜನಿಕ ರಸ್ತೆಯ

ಮೇಲೆ ನಿಂತು ಸಾರ್ವಜನಿಕರಿಗೆ ಕೇಳಿಸುವ ಹಾಗೆ ಕೂಗಿ ಹೇಳಿ ಅದರ ಒಂದು ಪ್ರತಿಯನ್ನು ಸದರಿ ಲಕ್ಷ್ಮಿ ಗುಡಿಯ ಗೋಡೆಗೆ ಅಂಟಿಸಿರುತ್ತೇನೆ. ಈ ಕುರಿತು ಸ್ಥಳದಲ್ಲೇ ಪಂಚನಾಮೆ ತಯಾರಿಸಿ ಅದನ್ನು ಪಂಚರಿಗೆ ಓದಿ ಹೇಳಿ ಸ್ಥಳದಲ್ಲೇ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಮತ್ತು ನಿಪಿ-1ಎ ಎಂದು ಗುರುತಿಸಲಾಯಿತು.

2. ದಿನಾಂಕ 11.04.2015 ರಂದು ಆರೋಪಿತನಾದ ಶಿವರಾಜ ತಂದೆ ಭೀಮಾಶಂಕರ ಸನಗುಂದಿ, ಸಾ. ಸನಗುಂದಿ ಗ್ರಾಮಕ್ಕೆ ಮದ್ಯಾಹ್ನ 1-ಗಂಟೆಗೆ ಭೇಟಿ ನೀಡಿ 1) ನಾಗೇಂದ್ರಪ್ಪ ತಂದೆ ಮಹಾದೇವ ಪಾಟೀಲ ಹಾಗೂ 2) ಪ್ರೇಮನಾಥ ತಂದೆ ಶಂಕರ ಅಂಕಲಗಿ ಸಾ. ಸನಗುಂಗಿ ಎನ್ನುವ ವ್ಯಕ್ತಿಗಳಿಗೆ ಉದ್ಘೋಷಣಾ ಜಾಹೀರು ಸಂದರ್ಭದಲ್ಲಿ ಪಂಚರಾಗಲು ವಿಷಯ ತಿಳಿಸಿ ಅವರನ್ನು ಕರೆದುಕೊಂಡು ಸದರಿ ಗ್ರಾಮದ ಮಾಳಿಂಗರಾಯ ಗುಡಿಯ ಹತ್ತಿರ ಹೋಗಿ ಸಾರ್ವಜನಿಕ ರಸ್ತೆಯ ಮೇಲೆ ನಿಂತು ಸಾರ್ವಜನಿಕರಿಗೆ ಕೇಳಿಸುವ ಹಾಗೆ ಕೂಗಿ ಹೇಳಿ ಅದರ ಒಂದು ಪ್ರತಿಯನ್ನು ಸದರಿ ಮಾಳಿಂಗರಾಯ ಗುಡಿಯ ಗೋಡೆಗೆ ಅಂಟಿಸಿರುತ್ತೇನೆ. ಈ ಕುರಿತು ಸ್ಥಳದಲ್ಲೇ ಪಂಚನಾಮೆ ತಯಾರಿಸಿ ಅದನ್ನು ಪಂಚರಿಗೆ ಓದಿ ಹೇಳಿ ಸ್ಥಳದಲ್ಲೇ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಮತ್ತು ನಿಪಿ-2ಎ ಎಂದು ಗುರುತಿಸಲಾಯಿತು.

3. ದಿನಾಂಕ 13.04.2015 ರಂದು ಆರೋಪಿ ಕಾಶಿನಾಥ ತಂದೆ ಅರ್ಜುನ ಭಜಂತ್ರಿ ಸಾ. ಸೊನ್ನ ಗ್ರಾಮಕ್ಕೆ ಮದ್ಯಾಹ್ನ 3-ಗಂಟೆಗೆ ಭೇಟಿ ನೀಡಿ 1) ಅನೀಲ ತಂದೆ ಈಶ್ವರಪ್ಪ ಅಂಕಲಗಿ ಹಾಗೂ 2) ಯಲ್ಲಪ್ಪ ತಂದೆ ಮಹಾದೇವಪ್ಪ ನಂದಗಿರಿ ಸಾ. ಸೊನ್ನ ಎನ್ನುವ ವ್ಯಕ್ತಿಗಳಿಗೆ ಉದ್ಘೋಷಣಾ ಜಾಹೀರು ಸಂದರ್ಭದಲ್ಲಿ ಪಂಚರಾಗಲು ವಿಷಯ ತಿಳಿಸಿ ಅವರನ್ನು ಕರೆದುಕೊಂಡು ಸದರಿ ಗ್ರಾಮದ ಹನುಮಾನ ಗುಡಿಯ ಹತ್ತಿರ ಹೋಗಿ ಸಾರ್ವಜನಿಕ ರಸ್ತೆಯ

ಮೇಲೆ ನಿಂತು ಸಾರ್ವಜನಿಕರಿಗೆ ಕೇಳಿಸುವ ಹಾಗೆ ಕೂಗಿ ಹೇಳಿ ಅದರ ಒಂದು ಪ್ರತಿಯನ್ನು ಸದರಿ ಹನುಮಾನ ಗುಡಿಯ ಗೋಡೆಗೆ ಅಂಟಿಸಿರುತ್ತೇನೆ. ಈ ಕುರಿತು ಸ್ಥಳದಲ್ಲೇ ಪಂಚನಾಮೆ ತಯಾರಿಸಿ ಅದನ್ನು ಪಂಚರಿಗೆ ಓದಿ ಹೇಳಿ ಸ್ಥಳದಲ್ಲೇ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಮತ್ತು ನಿಪಿ-3ಎ ಎಂದು ಗುರುತಿಸಲಾಯಿತು.

4. ದಿನಾಂಕ 10.04.2015 ರಂದು ಆರೋಪಿ ಮಹಾದೇವಪ್ಪ ತಂದೆ ಗುರುಪಾದಪ್ಪ ಸೌದಿ, ಸಾ. ಮಂಗಳವಾಡಾ, ಜಿ. ಸೋಲಾಪೂರ ಗ್ರಾಮಕ್ಕೆ ಮದ್ಯಾಹ್ನ 3-ಗಂಟೆಗೆ ಭೇಟಿ ನೀಡಿ 1) ರಘುನಾಥ ತಂದೆ ಭೀಮಜಿ ಗಾಯಕವಾಡ ಹಾಗೂ 2) ತಾನಾಜಿ ತಂದೆ ಸೀತಾರಾಮ ಬನ್ಸಡೆ ಎನ್ನುವ ವ್ಯಕ್ತಿಗಳಿಗೆ ಉದ್ಘೋಷಣಾ ಜಾಹೀರು ಸಂದರ್ಭದಲ್ಲಿ ಪಂಚರಾಗಲು ವಿಷಯ ತಿಳಿಸಿ ಅವರನ್ನು ಕರೆದುಕೊಂಡು ಸದರಿ ಗ್ರಾಮದ ಸಿದ್ರಾಮೇಶ್ವರ ಗುಡಿಯ ಹತ್ತಿರ ಹೋಗಿ ಸಾರ್ವಜನಿಕ ರಸ್ತೆಯ ಮೇಲೆ ನಿಂತು ಸಾರ್ವಜನಿಕರಿಗೆ ಕೇಳಿಸುವ ಹಾಗೆ ಕೂಗಿ ಹೇಳಿ ಅದರ ಒಂದು ಪ್ರತಿಯನ್ನು ಸದರಿ ಸಿದ್ರಾಮೇಶ್ವರ ಗುಡಿಯ ಗೋಡೆಗೆ ಅಂಟಿಸಿರುತ್ತೇನೆ. ಈ ಕುರಿತು ಸ್ಥಳದಲ್ಲೇ ಪಂಚನಾಮೆ ತಯಾರಿಸಿ ಅದನ್ನು ಪಂಚರಿಗೆ ಓದಿ ಹೇಳಿ ಸ್ಥಳದಲ್ಲೇ ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ಮತ್ತು ಅದರ ಮೇಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಮತ್ತು ನಿಪಿ-4ಎ ಎಂದು ಗುರುತಿಸಲಾಯಿತು.

ಸದರಿ ಪ್ರೊಕ್ಲೆಮೇಷನ್ ಸಮನ್ಸ್‌ಗಳನ್ನು ಮತ್ತು ಜಾರಿ ಮಾಡಿದ ಕುರಿತು ಪಂಚನಾಮೆ ವರದಿಗಳನ್ನು ನ್ಯಾಯಾಲಯಕ್ಕೆ ವರದಿ ಸಮೇತ ನೀಡಿರುತ್ತೇನೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ